ಒದಗಿಸಲಾಗುತ್ತಿದೆ. ಶಿಕ್ಷಕರಿಗೆ ವಿಶೇಷ ಅನುದಾನವನ್ನು ಖಾಸಗಿ ಅನುದಾನಿತ ಶಾಲೆಗಳಿಗೂ ಒದಗಿಸಲಾಗುತ್ತಿದೆ.

- ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ ಅಕ್ಷರ ದಾಸೋಹದಡಿಯಲ್ಲಿ ಮಧ್ಯಾಹ್ನ ಬಿಸಿಯೂಟ, ಹೆಣ್ಣು ಮಕ್ಕಳಿಗೆ ಶುಲ್ಕ ವಿನಾಯ್ತಿ ಮುಂತಾದ ಅನೇಕ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು ಜಾರಿಯಲ್ಲಿವೆ.

3714(4052); ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ);
ಮಾನ್ಯ ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಸ್ವಚ್ಛ ಗ್ರಾಮ ಯೋಜನೆಯ ಕಾರ್ಯಕ್ರಮ ಯಾವಾಗಿನಿಂದ ಜಾರಿಗೆ ಬಂದಿದೆ;

ಆ) ಈ ಕಾರ್ಯಕ್ರಮದಲ್ಲಿ ರಾಜ್ಯದ ಪಾಲು ಸಮುದಾಯ ವಂತಿಗೆ ಹಾಗೂ ಸಾಲ ಎಷ್ಟು;

ಇ) ಈ ಕಾರ್ಯಕ್ರಮದಡಿಯಲ್ಲಿ ಆಯ್ಕೆಯಾದ ಗ್ರಾಮಗಳೆಷ್ಟು; ಇದರಡಿ ಬರುವ ಮನೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಈ) ಇದು ಎಷ್ಟು ಹಂತದಲ್ಲಿ ಜಾರಿಗೆ ಬರಲಿದೆ ಇದುವರೆಗಿನ ತರಗತಿಯ ವಿವರಗಳನ್ನು ವರ್ಷವಾರು 31.3.2005 ರವರೆಗಿನ ಮಾಹಿತಿ ನೀಡುವುದು?

ಬಿ.ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್‌ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು)

ಅ) ಮೊದಲನೇ ಹಂತದ ಸ್ವಚ್ಛ ಗ್ರಾಮ ಯೋಜನೆಯು 2000–01ರಿಂದ ಹಾಗೂ 2ನೇ ಹಂತದ ಯೋಜನೆಯು 2003–04ನೇ ಸಾಲಿನಿಂದ ಜಾರಿಯಲ್ಲಿದೆ.

ಆ) ಮೊದಲನೇ ಹಂತದ ಈ ಕಾರ್ಯಕ್ರಮದ ಒಟ್ಟು ಅಂದಾಜು ವೆಚ್ಚ ರೂ.260.00 ಕೋಟಿ ಇದ್ದು, ಇದರ ಪೈಕಿ ರಾಜ್ಯದ ಪಾಲು ರೂ.26.00 ಕೋಟಿ ಸಮುದಾಯ ವಂತಿಗೆ ರೂ.26.00 ಕೋಟಿ ಮತ್ತು ಸಾಲಧನ ರೂ.208.00 ಕೋಟಿ ಇರುತ್ತದೆ.

2ನೇ ಹಂತದ ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ.100.00 ಕೋಟಿ, ಇದರ ಪೈಕಿ ರಾಜ್ಯದ ಪಾಲು ರೂ.10.00 ಕೋಟಿ ಸಮುದಾಯ ವಂತಿಗೆ ರೂ.10.00 ಕೋಟಿ ಮತ್ತು ಸಾಲ ಧನ ರೂ.80.00 ಕೋಟಿ ಇರುತ್ತದೆ.

ಇ) ಈ ಕಾರ್ಯಕ್ರಮದಡಿ ಮೊದಲನೇ ಹಂತದಲ್ಲಿ 1300 ಗ್ರಾಮಗಳು ಹಾಗೂ 2ನೇ ಹಂತದಲ್ಲಿ 1000 ಗ್ರಾಮಗಳನ್ನು ಸರ್ಕಾರದಿಂದ ಅನುಮೋದನೆ ಮಾಡಲಾಗಿದೆ. ಪ್ರತಿ ಗ್ರಾಮದಲ್ಲಿ ಸುಮಾರು 300 ರಿಂದ 500 ಮನೆಗಳು ಇರುವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.)

ಅನುಬಂಧ–1

ಶ್ರೀ ಜಗದೀಶ್ ಶೆಟ್ಟರ್ ವಿಧಾನಸಭಾ ಸದಸ್ಯರು ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:4052ರ ಉತ್ತರದ ಲಗತ್ತು

ಕ್ರ ಸಂ.	ಜಿಲ್ಲೆ	ಆಯ್ಕೆಯಾದ ಗ್ರಾಮಗಳು	
		ಮೊದಲನೇ ಹಂತ	ಎರಡನೇ ಹಂತ
1	ಬಾಗಲಕೋಟೆ	34	15
2	ಬೆಳಗಾಂ	126	99
3	ಬಳ್ಳಾರಿ	59	63
4	ಬೀದರ್	30	18
5	ಬಿಜಾಪುರ	82	11
6	ಬೆಂಗಳೂರು ಗ್ರಾ	87	26
7	ಬೆಂಗಳೂರು ನಗರ	20	30
8	ಚಿತ್ರದುರ್ಗ	35	59
9	ಚಿಕ್ಕಮಗಳೂರು	40	41
10	ಚಾಮರಾಜನಗರ	23	23
11	ದಕ್ಷಿಣ ಕನ್ನಡ	39	27
12	ದಾವಣಗೆರೆ	51	49
13	ಧಾರವಾಡ	21	70
14	ಗದಗ್	32	45
15	ಗುಲ್ಬರ್ಗಾ	76	104

16	ಹಾಸನ	56	52
17	ಹಾವೇರಿ	50	3
18	ಕೊಡಗು	20	10
19	ಕೋಲಾರ	49	49
20	ಕೊಪ್ಪಳ	32	57
21	ಮಂಡ್ಯ	60	22
22	ಮೈಸೂರು	53	11
23	ರಾಯಚೂರು	41	7
24	ಶಿವಮೊಗ್ಗ	28	67
25	ತುಮಕೂರು	39	22
26	ಉತ್ತರಕನ್ನಡ	79	10
27	ಉಡುಪಿ	38	10
	ಒಟ್ಟು	**1300**	**1000**

ಕ್ರ ಸಂ.	ವರ್ಷ	ಬಿಡುಗಡೆಯಾದ ಹಣ	ಖರ್ಚಾದ ಹಣ	ಪೂರ್ಣಗೊಂಡ ಕಾಮಗಾರಿಗಳು
1	2001–02	82.18	35.78	20
2	2002–03	87.47	81.03	41
3	2003–04	23.35	39.19	100
4	2004–05	2.41	20.9	137
5	2005–06 (ಮೇ 05ರ ಅಂತ್ಯಕ್ಕೆ)	0.14	1.10	4
	ಒಟ್ಟು	**195.55**	**178.00**	**302**